ಸಿಕ್ಕಿದೆ ಅದು ಸಿಕ್ಕು ೭-೮ ವರ್ಷಗಳಾಯಿತು. ಆದರೆ ಹೇಳಿಕೊಳ್ಳತಕ್ಕಂಥ ಅಭಿವೃದ್ಧಿ ಏನೂ ಆಗಿಲ್ಲ. ಆದನ್ನು ಹಾಗೆ ಬಿಡಬಾರದು ಚಿತ್ರ ನಗರಿಗೆ ಬೇಕಾದಂತಹ ಎಲ್ಲಾ ಸವಲತ್ತುಗಳನ್ನು ಒದಗಿಸಿ ಕೊಟ್ಟು ಕನ್ನಡ ಚಿತ್ರ ಜಗತ್ತು ಹೆಚ್ಚು ವಿಸ್ತಾರವಾಗಿ ಬೆಳೆಯುವ ರೀತಿಯಲ್ಲಿ ಮಾಡಲು ಬರತಕ್ಕಂತಹ ಹಣಕಾಸು ವರ್ಷದಲ್ಲಿ ಚಿತ್ರ-ನಗರಿ ನಿರ್ಮಾಣಕ್ಕೆ ಸರಿಯಾದಂತಹ ಸ್ವರೂಪ ಬರುವಂತಹ ರೀತಿಯಲ್ಲಿ ಅಭಿವೃದ್ಧಿ ಕಾಣುವಂತಹ ರೀತಿಯಲ್ಲಿ ಕಾರ್ಯಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ವಿ. ವೆಂಕಟಪ್ಪ.— ಕನ್ನಡ ಚಿತ್ರಗಳನ್ನು ಕಡ್ಡಾಯ ಮಾಡುವುದಕ್ಕೆ ಆಲೋಚನೆ ಮಾಡುತ್ತಿದ್ದೇವೆಂದು ಮಾನ್ಯ ಮಂತ್ರಿಗಳು ಹೇಳಿದರು. ಇತ್ತೀಚೆಗೆ ನಮ್ಮ ಕೋಲಾರ ಜಿಲ್ಲೆಯ ಚಲನಚಿತ್ರ ಮಂದಿರದ ಮಾಲೀಕರು ನನ್ನ ಹತ್ತಿರ ಬಂದು ನಾವು ಕನ್ನಡ ಚಿತ್ರಗಳನ್ನು ತರಿಸಿ ೭-೮ ವಾರಗಳನ್ನು ನಡೆಸಬೇಕೆಂದು ಸರಕಾರ ಹೇಳಿದರೆ ನಮಗೆ ಕಷ್ಟವಾಗುತ್ತದೆ ಲಾಸ್ ಆಗುತ್ತದೆ. ಎಂದು ಹೇಳಿದರು. ನಮ್ಮ ಜಿಲ್ಲೆಯಲ್ಲಿ ತೆಲುಗು ಹೆಚ್ಚಾಗಿ ಇದೆ. ಅಲ್ಲಿ ೩-೪ ದಿವಸ ಇಲ್ಲವೇ ಒಂದು ವಾರದ ಮೇಲೆ ಕನ್ನಡ ಚಿತ್ರ ನಡೆಯುವುದಿಲ್ಲ. ಅಂಥಾದ್ದರಲ್ಲಿ ಸರಕಾರ ೪-೫ ವಾರಗಳನ್ನು ನಡೆಸಬೇಕೆಂದು ಹೇಳಿದರೆ ಆ ಮಾಲೀಕನು ಲಾಸ್ ಆಗಿ ಚಿತ್ರವಂದಿರವನ್ನು ಮುಚ್ಚುತಕ್ಕಂತಹ ಪರಿಸ್ಥಿತಿ ಬಂದಿದೆ. ಇದನ್ನು ಕಡ್ಡಾಯವಾಗಿ ಮಾಡುವಾಗ ಎಲ್ಲೆಲ್ಲಿ ತೆಲುಗು, ಬೇರೆ ಭಾಷೆಗಳು ಹೆಚ್ಚಾಗಿ ಬಳಕೆಯಲ್ಲಿರುತ್ತವೆ ಅಂತಹ ಕಡೆಗಳಿಗೆ ವಿನಾಯ್ತಿ ಕೊಡುತ್ತೀರಾ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ.— ನಾವು ಅವರಿಗೆ ಪ್ರೋತ್ಸಾಹ ಕೊಡುವುದು ಕನ್ನಡ ಚಿತ್ರ ಬೆಳೆಯಲಿ ಎಂದು. ಕನ್ನಡ ಚಿತ್ರವನ್ನು ಅವರೂ ಕೂಡ ನೋಡಲಿ ಎಂದು ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ,

ಕೆಲವು ಕಡೆಗಳಲ್ಲಿ ಅಭಿರುಚಿ ಕನ್ನಡದ ಬಗ್ಗೆ ಬೆಳೆದಿಲ್ಲ. ಅಲ್ಲಿ ತೆಲುಗು ಚಿತ್ರಗಳನ್ನೇ ತೋರಿಸುತ್ತಿರುವುದರಿಂದ ತೆಲುಗಿನ ಅಭಿರುಚಿ ಹಿಡಿದಿದೆ. ಆದೇ ರೀತಿ ತಮಿಳು ಚಿತ್ರಗಳನ್ನೇ ತೋರಿಸುವ ಕಡೆಗಳಲ್ಲಿ ತಮಿಳಿನ ಅಭಿರುಚಿಯೇ ಹಿಡಿದಿದೆ. ಮೊದಲಿನಿಂದಲೂ ಕನ್ನಡ ಚಿತ್ರಗಳನ್ನೇ ಹಾಕಿದ್ದರೆ ಕನ್ನಡದ ಅಭಿರುಚಿ ಬರುತ್ತಿತ್ತು. ನಾನು ಇಷ್ಟು ಮಾತ್ರ ಹೇಳುತ್ತೇನೆ, ತೆಲುಗಿನಲ್ಲಿ ಎಷ್ಟು ಸಂಪನ್ನತೆ ಇದೆಯೋ ಅದಕ್ಕಿಂತ ಹೆಚ್ಚಿನ ಸಂಪನ್ನತೆ ಈ ಕನ್ನಡ ಚಿತ್ರಗಳಲ್ಲಿದೆ. ತೆಲುಗು, ತಮಿಳು ಚಿತ್ರಗಳಿಗಿಂತಲೂ ಸುಂದರವಾದ, ಮನರಂಜನೀಯವಾದ ಚಿತ್ರಗಳನ್ನು ತಯಾರಿಸುವ ಶಕ್ತಿ ನಮ್ಮ ಕನ್ನಡಿಗರಲ್ಲಿದೆ. ಕನ್ನಡ ಚಿತ್ರಗಳ ಕಡ್ಡಾಯ ಪ್ರದರ್ಶನದ ವಿಚಾರವನ್ನು ನಾವು ಆಲೋಚನೆ ಮಾಡುತ್ತಿದ್ದೇವೆ.

ಮೂಲೂರಿನಲ್ಲಿ ಕ್ರೀಡಾಂಗಣ ನಿರ್ಮಾಣ

೧೫೧. ಶ್ರೀ ಎ. ನಾಗರಾಜ (ಮೂಲೂರು). — ಮಾನ್ಯ ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸರ್ಕಾರದ ಮುಂದೆ ಮೂಲೂರಿನಲ್ಲಿ ಕ್ರೀಡಾಂಗಣ ನಿರ್ಮಾಣದ ಬಗ್ಗೆ ಪ್ರಸ್ತಾವನೆ ಇದೆಯೆ ?

ಆ) ಇದ್ದಲ್ಲಿ ೧೯೯೦ನೇ ಹಣಕಾಸಿನ ವರ್ಷದ ಆಯವ್ಯಯದಲ್ಲಿ ಸೇರಿಸಲಾಗುವುದೇ ?

ಶ್ರೀ ಎಂ. ವೀರಪ್ಪ ಮೊಯಿಲಿ (ವಾರ್ತಾ ಪ್ರವಾಸೋದ್ಯಮ ಮತ್ತು ಯುವಜನ ಸೇವಾ ಮಂತ್ರಿಗಳು).—

೧) ಇಲ್ಲ.

೨) ಉದ್ಭವಿಸುವುದಿಲ್ಲ.

ಶ್ರೀ ಎ. ನಾಗರಾಜು.—ಸ್ವಾಮಿ ನನ್ನ ಎರಡನೆಯ ಪ್ರಶ್ನೆಗೆ 'ಉದ್ಭವಿಸುವುದಿಲ್ಲ' ಎಂದು ಉತ್ತರ ನೀಡಿದ್ದಾರೆ. ಆದರೆ ಮೂಲೂರು ಟೌನ್ ನಮ್ಮ ಬೆಂಗಳೂರಿಗೆ ೪೫ ಕಿಲೋಮೀಟರ್ ದೂರದಲ್ಲಿದೆ. ಮುಂದಿನ ತಿಂಗಳು ಅಲ್ಲಿ ದಕ್ಷಿಣ ಭಾರತದ ಮಟ್ಟದಲ್ಲಿ ಫುಟ್‌ಬಾಲ್ ಪಂದ್ಯ ನಡೆಯುತ್ತದೆ. ಮಾನ್ಯ ಮಂಂತ್ರಿಗಳು ಇದಕ್ಕೆ ಧನಸಹಾಯ ಮಾಡುವುದಾಗಿ ಒಪ್ಪಿಕೊಂಡಿದ್ದಾರೆ. ಮುನಿಸಿಪಾಲಿಟಿಗಳೂ ಕೂಡ ಹಣ ಸಹಾಯ ಮಾಡಲು ಮುಂದೆ ಬಂದಿವೆ. ವಾಲಂಟರಿ ಆರ್ಗನೈಸೇಷನ್‌ಗಳಾದ ರೋಟರಿ ಕ್ಲಬ್, ಲಯನ್ಸ್ ಕ್ಲಬ್‌ಗಳೂ ಕೂಡ ಹಣ ಸಹಾಯ ಮಾಡಲು ಮುಂದೆ ಬಂದಿದೆ.

ಮೂಲೂರು ಟೌನ್ ಬಹಳ ಮುಖ್ಯವಾದ ಸ್ಥಳ. ಆಲ್ಲಿ ಪ್ರಥಮ ದರ್ಜೆ ಕಾಲೇಜೂ ಕೂಡ ಇದೆ. ಆದ್ದರಿಂದ ಈ ಸ್ಟೇಡಿಯಂನ್ನು ಮುಂದಿನ ಆಯವ್ಯಯದಲ್ಲಿ ಸೇರಿಸಿ ಕಾರ್ಯಗತ ಮಾಡಿಸಿಕೊಡ ಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಪ್ರಶ್ನೆ ಕೇಳಿ ಆತ ನಾನು ಹೇಳಿದರೆ ನೀವು ಪ್ರಾರ್ಥಿಸಿಕೊಳ್ಳುತ್ತೇನೆ ಅಂದರೆ ಹೇಗೆ?

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಈಗ ಏನಾಗಿದೆ ಎಂದರೆ ಅನೇಕ ಜಿಲ್ಲಾ ಮಟ್ಟದ ಸ್ಟೇಡಿಯಂ ಕೆಲಸಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಸುಮಾರು ೧೦-೧೫ ವರ್ಷಗಳಾದರೂ ಇನ್ನೂ ಅವುಗಳ ಕೆಲಸ ಪೂರ್ತಿ ಆಗಿಲ್ಲ. ಇದಕ್ಕೆ ಕಾರಣ ಏನೆಂದರೆ, ನಾವು ಸಾರ್ವಜನಿಕರಿಂದ ಪಂತಿಗೆಯನ್ನು ಎತ್ತಿ ಕೊಡುತ್ತೇವೆ. ಅದಕ್ಕೆ ಸರ್ಕಾರದವರೂ ಸ್ವಲ್ಪ ಹಣವನ್ನು ಹಾಕಿ ನಮಗೆ ಸ್ಟೇಡಿಯಂ ಕೆಲಸವನ್ನು ಪೂರ್ತಿ ಮಾಡಿಸಿ ಕೊಡಿ ಎಂದು ಕೇಳಿಕೊಳ್ಳುತ್ತಾರೆ. ಅವರ ಕೇಳಿಕೆಯ ಮೇರೆಗೆ ನಾವು ಕೆಲಸದ ಪ್ರಾರಂಭ ಮಾಡಿದರೆ ಅವರು ತಮ್ಮ ಪಂತಿಗೆಯನ್ನು ಕೊಡುವುದೇ ಇಲ್ಲ. ಕೊನೆಗೆ ಸರ್ಕಾರದವರೇ ಎಲ್ಲಾ ಹಣವನ್ನೂ ಹಾಕಿ ಪೂರೈಸಿ ಕೊಡಬೇಕಾದ ಪರಿಸ್ಥಿತಿ ಬರುತ್ತದೆ. ಈಗಾಗಲೇ ಸಾಗರ, ಸಿರ್ಸಿ, ಹೊಸಕೋಟೆ, ದಾವಣಗೆರೆ, ಚಿಕ್ಕಬಳ್ಳಾಪುರ ಇತ್ಯಾದಿ ಕಡೆಗಳಲ್ಲಿ ಈ ಸ್ಟೇಡಿಯಂ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸಾರ್ವಜನಿಕರು ಸರ್ಕಾರದವರನ್ನೇ ಕೇಳುತ್ತಿದ್ದಾರೆ. ಈಗ ಮಾನ್ಯ ಸದಸ್ಯರು ಕೇಳುವಂತೆ ಮುಂದಿನ ಆಯವ್ಯಯದಲ್ಲಿ ಈ ಕೆಲಸವನ್ನು ಸೇರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಕಾರಣ ಈಗಾಗಲೇ ಆಯವ್ಯಯವನ್ನು ಮಂಡಿಸಿದ್ದಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಕ್ರೀಡಾಂಗಣಗಳನ್ನು ಮಾಡಬೇಕೆಂಬ ಯೋಜನೆ ಸರ್ಕಾರಕ್ಕಿದೆ. ಅದೇರೀತಿ ತಾಲ್ಲೂಕು ಮತ್ತು ಮಂಡಲ ಮಟ್ಟದಲ್ಲಿ ಆಯಾಯ ಸ್ಥಳಗಳಿಗನುಗುಣವಾದ ಸಣ್ಣಸಣ್ಣ ಸ್ಟೇಡಿಯಂಗಳಿಗೆ ಸೂಕ್ತವಾದ ಸ್ಥಳಗಳನ್ನು ಗುರುತಿಸುವಂತೆ ಜಿಲ್ಲಾ ಪರಿಷತ್ತುಗಳಿಗೆ ನಾವು ತಿಳಿಸಿದ್ದೇವೆ. ಸಾರ್ವಜನಿಕರಿಂದ ವಂತಿಗೆ ಎಲ್ಲೆಲ್ಲಿ ಬರುತ್ತದೆ ಅದನ್ನು ಕ್ರೋಢೀಕರಿಸಿಕೊಂಡು ಸರ್ಕಾರದ ವತಿಯಿಂದ ನೀಡಬೇಕಾದ ಹಣವನ್ನೂ ಹಾಕಿ ಆ ಸ್ಟೇಡಿಯಂಗಳನ್ನು ಮಾಡಿಸಿಕೊಡುತ್ತೇವೆ. ಇನ್ನು ಮೂಲೂರು ಸ್ಟೇಡಿಯಂ ವಿಚಾರವನ್ನು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಇದನ್ನು ಸಾಧ್ಯವಾದರೆ ಮಾಡಿಸಿ ಕೊಡುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಮೂಡಿಗೆರೆ ತಾಲ್ಲೂಕಿನ ಕಳಸಾ–ಹೊರನಾಡು ರಸ್ತೆ ಹಾಗೂ ಸೇತುವೆ

೧೫೦. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೇ ?

ಅ) ಮೂಡಿಗೆರೆ ತಾಲ್ಲೂಕಿನ ಕಳಸಾ–ಹೊರನಾಡು ರಸ್ತೆ (ಅನ್ನಪೂರ್ಣೇಶ್ವರಿ ದೇವಸ್ಥಾನಕ್ಕೆ ಹೋಗುವ) ಹಾಗು ಸೇತುವೆಯ ಅವಶ್ಯಕತೆಯ ಬೇಡಿಕೆಯು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಈ ಬಗ್ಗೆ ಇದುವರೆಗೂ ಕ್ರಮ ಕೈಗೊಳ್ಳದಿರಲು ಕಾರಣಗಳೇನು ?

ಶ್ರೀ ಜಿ. ಪುಟ್ಟಸ್ವಾಮಿಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಯವರು).—

ಆ) ಬಂದಿದೆ.

ಆ) ಸೇತುವೆಯ ನಿವೇಶನವು ಉದ್ದೇಶಿತ ಭದ್ರಾ ಮೇಲ್ದಂಡೆ ಯೋಜನೆಯ ಆಣೆಕಟ್ಟಿನ ಮುಳುಗಡೆ ಪ್ರದೇಶದಲ್ಲಿ ಬರುವುದರಿಂದ ಮೇಲ್ಕಟ್ಟದ ಸೇತುವೆಯ ಬದಲಾಗಿ ಒಂದು ಮುಳುಗಡೆ ಸೇತುವೆ ನಿರ್ಮಾಣ ಮಾಡಲು ಪರಿಶೀಲನೆ ನಡೆಸಲಾಗಿದೆ.

ಶ್ರೀಮತಿ ಮೋಟಮ್ಮ.—ಮಾನ್ಯ ಅಧ್ಯಕ್ಷರೇ ಈ ಪ್ರದೇಶದ ನೂರಾರು ವರ್ಷಗಳ ಬೇಡಿಕೆ ಇದು ಆಗಿದೆ ಎಲ್ಲಾ ಮಂತ್ರಿಗಳಿಗೂ ? ಇಲಾಖೆಯಲ್ಲಿನ ಎಲ್ಲಾ ಚೀಫ್ ಇಂಜಿನೀಯರುಗಳು ಅಲ್ಲಿಗೆ ಬಂದಿದ್ದರೆ ವರಿಗೆ ಬೇಡಿಕೆಯನ್ನು ಕೊಟ್ಟಿದ್ದರೂ ಇದುವರೆಗೆ ಈ ಬೇಡಿಕೆಯು ಈಡೇರಲಿಲ್ಲ ಈಗ ನನಗೆ ಜನಗಳು ಏನು ಹೇಳುತ್ತಿದ್ದಾರೆಂದರೆ ಎರಡನೆಯ ಸಾರಿಗೆ ನಿಮ್ಮನ್ನು ಆಯ್ಕೆಮಾಡುತ್ತಿದ್ದೇವೆ ಈ ಕೆಲಸ ಹಾಗೆಯೇ ಉಳಿದಿದೆ. ನೀವು ಈ ರಸ್ತೆ ಮತ್ತು ಸೇತುವೆಯ ಕೆಲಸವನ್ನು ಮಾಡಿಸದಿದ್ದರೆ ನಮ್ಮ ಕ್ಷೇತ್ರಕ್ಕೆ ಬರಬಾರದೆಂದು ಹೇಳುತ್ತಿದ್ದಾರೆ ಇದನ್ನು ಪಿ.ಡಬ್ಲ್ಯು.ಡಿ ಇಲಾಖೆಯವರು ತೆಗೆದುಕೊಂಡು ಇದಕ್ಕಾಗಿ ೨೪ ಲಕ್ಷ ರೂಪಾಯಿಗಳನ್ನು ಮಂಜೂರಾತಿಯನ್ನೂ ಸಹ ಮಾಡಿದಾರೆ. ಮಾನ್ಯ ಡಿ.ಬಿ. ಚಂದ್ರೇಗೌಡರು ನೀರಾವರಿ ಮಂತ್ರಿಗಳಾಗಿದ್ದಾಗ ಫೌಂಡೇಷನ್ ಸ್ಟೋನ್ ಸಹ ಹಾಕಿದ್ದರು. ಅಷ್ಟರಲ್ಲಿ ನ್ಯಾಷನಲ್ ಹೈವೆರವರು ಭದ್ರಾ ಮೇಲ್ದಂಡೆಯಾಗುತ್ತಿದೆ ಎಂದು ಸ್ಟೇ ಕೊಟ್ಟರು ಆದರೆ ನಮ್ಮ ಜನರು